ದಿನಾಂಕಃ **03.04.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ- ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ. ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ನೋಡಿ ಗುರುತಿಸುತ್ತಿದ್ದೇನೆ. ಒಂದು ಆರ್ ಟಿ ಸಿ ಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದರ ಹಿಂದಿನ ಪುಟದಲ್ಲಿ ಖಾಲಿ ಇದ್ದು ಅದಕ್ಕೆ ಮುಂದಿನ ಪುಟ ಖಾಲಿ ಇರುವ ಮತ್ತೊಂದು ಆರ್ ಟಿ ಸಿ ಯ ಭಾಗವನ್ನು ಸೇರಿಸಿ ಪಿನ್ ಮಾಡಿದ್ದು ಪ್ರತಿವಾದಿಗಳ ಪರ ವಕೀಲರು ಅದನ್ನು ನಿಶಾನಿಸಲು ತಕರಾರು ತೆಗೆದಿರುವುದರಿಂದ ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಪಿ.1 ಎಂದು ಗುರುತಿಸಲಾಯಿತು. ಎರಡು ಆರ್ ಟಿ ಸಿ ಗಳನ್ನು ನಿಪಿ.2 ಮತ್ತು 3 ಎಂದು, ವಂಶವೃಕ್ಷದ ಪ್ರಮಾಣಪತ್ರವನ್ನು ನಿಪಿ4 ಎಂದು ಗುರುತಿಸಲಾಯಿತು.

(ಸಮಯ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ ದಂ. ನ್ಯಾಯಾಲಯ , ಹುಣಸೂರು.